ಶ್ರೀ ಕೆ.ಎಂ. ಕೃಷ್ಣಮೂರ್ತಿ: ಯಾವುದೇ ಸರ್ಕಾರವಿರಲಿ ಅಭಿವೃದ್ಧಿಯಾಗಬೇಕೆಂದರೆ.....

ಉಪಾಧ್ಯಕ್ಷರು: ಉದಾಸಿಯವರೇ ಹೇಳಿ.

(ಅಡಚಣೆ)

ಶ್ರೀ ಸಿ.ಎಂ. ಉದಾಸಿ: ಈಗಾಗಲೇ ಉತ್ತರವನ್ನು ಕೊಟ್ಟಾಗಿದೆ.

(ಅಡಚಣೆ)

ಉಪಾಧ್ಯಕ್ಷರು: ಈಗ ಏನೂ ಕೇಳಿಸಲ್ಲ. ದಯವಿಟ್ಟು ಒಂದು ನಿಮಿಷ ಕೇಳಿ. ಪಾಟೀಲರೇ, ಕುಳಿತುಕೊಳ್ಳಿ. ಅವರೇನು ಹೇಳುತ್ತಾರೆ ಕೇಳಿ ಸ್ವಲ್ಪ.

ಶ್ರೀ ಸಿ.ಎಂ. ಉದಾಸಿ: ಈ ಮೊದಲೇ ಇದರ ಬಗ್ಗೆ ಚರ್ಚೆಯಾಗಿದೆ. ಮತ್ತೆ ಇದರ ಬಗ್ಗೆ ಚರ್ಚೆ ಮಾಡುವಂಥ ಅವಶ್ಯಕತೆ ಇಲ್ಲ.

ಉಪಾಧ್ಯಕ್ಷರು: ಪಾಟೀಲರೇ, ಒಂದು ನಿಮಿಷ ಅವರೇನು ಹೇಳುತ್ತಾರೆ ಕೇಳಿ. ಆಮೇಲೆ ಕೇಳೋಣ.

ಶ್ರೀ ಸಿ.ಎಂ. ಉದಾಸಿ: ಹಣಕಾಸಿನ ಲಭ್ಯತೆ ಮೇಲೆ ಅದನ್ನು ಸರಿಪಡಿಸುತ್ತೇವೆನ್ನುವ ಭರವಸೆಯನ್ನು ಕೊಟ್ಟಿದ್ದೇವೆ. ಅದಕ್ಕೆ ಅವಕಾಶ ಕೊಡಬೇಕೆಂದು ಇಷ್ಟು ಕೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ: ಯಾವಾಗ ಹೇಳಿ?

ಉಪಾಧ್ಯಕ್ಷರು: ಈಗ ಯಾವುದಾದರೊಂದು ಡೇಟ್ ಕೊಟ್ಟುಬಿಡಿ.

ಈಗ ಅವರು ಹಣಕಾಸಿನ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳು ಬಂದ ಮೇಲೆ ಎಂದು ಹೇಳಿದ್ದಾರಲ್ಲಾ.

(ಅಡಚಣೆ)

ಶ್ರೀ ಅಂಜನ ಮೂರ್ತಿ: ಮಾನ್ಯ ಮಂತ್ರಿಗಳು ಹಾರಿಕೆಯ ಉತ್ತರ ಕೊಡುತ್ತಿದ್ದಾರೆ.

ಉಪಾಧ್ಯಕ್ಷರು: ಹೊರಟ್ಟಿಯವರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಬಸವರಾಜ ಎಸ್. ಹೊರಟ್ಟಿ: 28 ಜೂನ್ 2006ರಂದು 11ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸುವ 67 ಪ್ರಶ್ನೆಗಳ ಪೈಕಿ 60 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂಧ–1)

ಉಪಾಧ್ಯಕ್ಷರು: ಮಂಡಿಸಲಾಗಿದೆ.

(ಗೊಂದಲ)

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ವಿಷಯ: ರಸ್ತೆ ಅಭಿವೃದ್ಧಿಗೆ ಹಣ ಬಿಡುಗಡೆಯಲ್ಲಿ ತಾರತಮ್ಯ ಮಾಡಿರುವ ಬಗ್ಗೆ

ಉಪಾಧ್ಯಕ್ಷರು: ಈಗ ಶೂನ್ಯವೇಳೆಯಲ್ಲಿ ಸಿ.ಟಿ. ರವಿಯವರು ಮಾತನಾಡಿ.

(ಅಡಚಣೆ)